ಕರ್ನಾಟಕ ಸರ್ಕಾರ
# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು

ಕರಾಉಶಿಪ/30/24ನೇ ಕಾ. ನಿ. ಸಮಿತಿ ಸಭೆ/2022-23/329 ದಿನಾಂಕ: 06.05.2023

ಇವರಿಗೆ,

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಕಾರ್ಯನಿರ್ವಾಹಕ ಸಮಿತಿಯ ಎಲ್ಲಾ ಸದಸ್ಯರುಗಳಿಗೆ

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 24ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು

*****

ದಿನಾಂಕ:27.04.2023 (ಗುರುವಾರ) ರಂದು ಬೆಳಿಗ್ಗೆ 11:30 ಕ್ಕೆ ಪ್ರೊ.ವೈ.ಎಸ್. ಸಿದ್ದೇಗೌಡ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 24ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಅವಗಾಹನೆಗಾಗಿ ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

(ಪ್ರೊ. ಗೋಪಾಲಕೃಷ್ಣ ಜೋಷಿ)
ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿ ಮಾಹಿತಿಗಾಗಿ:

1. ಉಪಾಧ್ಯಕ್ಷರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು
2. ಕಛೇರಿ ಪ್ರತಿ.

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು

## ದಿನಾಂಕ:27.04.2023 ರಂದು ಬೆಳಿಗ್ಗೆ 11.30 ಕ್ಕೆ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 24ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು

**ಉಪಸ್ಥಿತರು:**

| ಕ್ರ.ಸಂ | ಹೆಸರು ಮತ್ತು ಹುದ್ದೆ | ಸದಸ್ಯರು |
|---|---|---|
| 1 | ಪ್ರೊ. ವೈ.ಎಸ್ ಸಿದ್ದೇಗೌಡ<br>ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು | ಅಧ್ಯಕ್ಷರು |
| 2 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಉನ್ನತ ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ವೈದ್ಯಕೀಯ ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯರು |
| 4 | ಪ್ರೊ. ಜೋಗನ್ ಶಂಕರ್<br>ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ | ಸದಸ್ಯರು |
| 5 | ಶ್ರೀ ಶ್ರೀನಾಥ್ ಎನ್. ಎಸ್ Managing Director, MERCK Life Science | ಸದಸ್ಯರು |
| 6 | ಪ್ರೊ. ಹರೀಶ್ ರಾಮಸ್ವಾಮಿ<br>ಕುಲಪತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು | ಸದಸ್ಯರು |
| 7 | ಪ್ರೊ. ದಯಾನಂದ ಅಗ್ಸಾರ್<br>ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| 8 | ಪ್ರೊ. ಗೋಪಾಲಕೃಷ್ಣ ಜೋಷಿ<br>ಕಾರ್ಯನಿರ್ವಾಹಕ ನಿರ್ದೇಶಕರು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು | ಸದಸ್ಯ ಕಾರ್ಯದರ್ಶಿಗಳು |
| 9 | ಡಾ. ಟಿ.ಎನ್ ತಾಂಡವಗೌಡ<br>ಆಡಳಿತಾಧಿಕಾರಿಗಳು, ಕರಾಉಶಿಪ | ವಿಶೇಷ ಆಹ್ವಾನಿತರು |
| 10 | ಶ್ರೀ. ಹೆಚ್.ಸಿ ಜಯಪ್ರಕಾಶ್<br>ಲೆಕ್ಕಾಧಿಕಾರಿಗಳು, ಕರಾಉಶಿಪ | ವಿಶೇಷ ಆಹ್ವಾನಿತರು |

27.04.2023 ರಂದು ಬೆಳಿಗ್ಗೆ 11.30 ಗಂಟೆಗೆ ನಡೆದ 24ನೇ ಕಾರ್ಯನಿರ್ವಾಹಕ ಸಮಿತಿ ಸಭೆಗೆ ನೂತನವಾಗಿ ನೇಮಕವಾದ ಪರಿಷತ್ತಿನ ಉಪಾಧ್ಯಕ್ಷರಾದ ಕರ್ನಲ್ (ಪ್ರೊ) ವೈ.ಎಸ್. ಸಿದ್ದೇಗೌಡ ರವರನ್ನು ಕಾರ್ಯನಿರ್ವಾಹಕ ನಿರ್ದೇಶಕರು ಪರಿಚಿಯಿಸಿ ಸ್ವಾಗತಿಸಿದರು ಹಾಗೂ ಸಮಿತಿ ಸಭೆಗೆ ನೇಮಕವಾದ ನೂತನ ಸದಸ್ಯರನ್ನು ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರನ್ನು ಸಭೆಗೆ ಪರಿಚಯಿಸಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಮಾನ್ಯ ಸಭಾಧ್ಯಕ್ಷರನ್ನು ಸಭೆ ನಡೆಸಿಕೊಡಲು ಕೋರಿದರು.

| ವಿಷಯ ಸಂಖ್ಯೆ | ವಿಷಯಗಳು |
|---|---|
| 01 | **ವಿಷಯ: ದಿನಾಂಕ: 28.01.2022 ರಂದು ನಡೆದ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು**<br><br>ದಿನಾಂಕ: 28.01.2022 ರಂದು ನಡೆದ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ದೃಢೀಕರಿಸಲು ಕಾರ್ಯನಿರ್ವಾಹಕ ಸಮಿತಿ ಸಭೆಗೆ ಸಲ್ಲಿಸಿದೆ.<br>(23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ಲಗತ್ತಿಸಿದೆ)<br><br>**ನಿರ್ಣಯ:**<br>**ದಿನಾಂಕ: 28.01.2022 ರಂದು ನಡೆದ ಕಾರ್ಯನಿರ್ವಾಹಕ ಸಮಿತಿಯ 23ನೇ ಸಭೆಯ ನಡವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದೇ ಇರುವ ಕಾರಣ ನಡವಳಿಗಳನ್ನು ಧೃಢೀಕರಿಸಲಾಯಿತು .** |
| 02 | **ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳು**<br><br>ದಿನಾಂಕ: 28.01.2022 ರಂದು ನಡೆದ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಮುಂದೆ ಮಂಡಿಸಿದೆ.<br><br>**ನಿರ್ಣಯ:**<br>**ಸಮಿತಿಯು 23ನೇ ನಡವಳಿಗಳ/ನಿರ್ಣಯಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳನ್ನು ಅವಲೋಕಿಸಿ ಅನುಮೋದಿಸಿತು.** |
| 03 | **ವಿಷಯ : ಪರಿಷತ್ತಿನ ಮತ್ತು ರೂಸಾ ಖಾತೆಯ 2021-22ನೇ ಸಾಲಿನ ಮತ್ತು 2022-23 ಸಾಲಿನ ಲೆಕ್ಕ-ಪತ್ರಗಳನ್ನು ಅನುಮೋದಿಸಿ ಮಹಾಲೇಖಪಾಲಕರನ್ನು ಆಡಿಟ್ ಮಾಡಲು ಆಹ್ವಾನಿಸುವ ಬಗ್ಗೆ**<br><br>ಪರಿಷತ್ತಿನ ಮತ್ತು ರೂಸಾ ಖಾತೆಯ 2021-22ನೇ ಸಾಲಿನ ಮತ್ತು 2022-23ನೇ ಸಾಲಿನ ಲೆಕ್ಕ ಪತ್ರಗಳನ್ನು ಚಾರ್ಟೆಡ್ ಅಕೌಂಟೆಂಟ್ ರವರು ಸಂಕಲಿಸಿ ಸಿದ್ಧಪಡಿಸಿದ್ದು, ಸದರಿ ಲೆಕ್ಕ ಪತ್ರಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆಗೆ ಸಲ್ಲಿಸಿದೆ ಮತ್ತು ಈ ಲೆಕ್ಕಪತ್ರಗಳನ್ನು ಆಡಿಟ್ ಮಾಡುವಂತೆ ಮಹಾಲೇಖಪಾಲಕರನ್ನು ಕೋರಬಹುದಾಗಿದೆ. (ಪ್ರತಿ ಲಗತ್ತಿಸಿದೆ)<br><br>**ನಿರ್ಣಯ:**<br><br>**ಪರಿಷತ್ತಿನ ಮತ್ತು ರೂಸಾ ಖಾತೆಯ 2021-22 ಹಾಗೂ 2022-23ನೇ ಸಾಲಿನ ಲೆಕ್ಕ ಪತ್ರಗಳನ್ನು ಸಮಿತಿಯು ವಿವರವಾಗಿ ಪರಿಶೀಲಿಸಿ ಈ ಲೆಕ್ಕ ಪತ್ರಗಳನ್ನು Panel ನಲ್ಲಿರುವ chartered Accountant ರವರಿಂದ ಆಂತರಿಕ ಲೆಕ್ಕ ಪರಿಶೋಧನೆ ಮಾಡಿಸಿ ಈ ವರದಿಯನ್ನು ಮುಂದಿನ ಕಾರ್ಯಕಾರಿ ಸಮಿತಿ ಸಭೆ ಮುಂದೆ ಮಂಡಿಸಲು ಸಭೆ ನಿರ್ಣಯಿಸಿತು ಹಾಗೂ ಪರಿಷತ್ತಿನ ಮತ್ತು ರೂಸಾ 2021-22 ಮತ್ತು 2022-23 ನೇ ಸಾಲಿನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡುವಂತೆ ಮಹಾಲೇಖಪಾಲಕರನ್ನು ಕೋರಲು ಸಭೆ ಅನುಮೋದಿಸಿತು.** |

| | |
|---|---|
| 04 | **ವಿಷಯ: ಪರಿಷತ್ತಿನ 2ನೇ ಮಹಡಿಯಲ್ಲಿರುವ ಸಭಾಂಗಣಕ್ಕೆ ಬೆಂಕಿ ಅವಘಡ ಸಂಭವಿಸಿದ್ದ ಕಾರಣ, ವಿಡಿಯೋ ಕಾನ್ಫರೆನ್ಸ್ ಸಭಾಂಗಣವನ್ನು ನವೀಕರಿಸಲು Civil & Electrical work ಮಾಡಿಸಲು ಮತ್ತು Electronic Equipment's ಗಳನ್ನು ಖರೀದಿಸಲು Gem Portal ನಲ್ಲಿ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರನ್ನು ನೇಮಿಸಿರುವ ಬಗ್ಗೆ**<br><br>ದಿನಾಂಕ:24.08.2022 ರಂದು ರಾತ್ರಿ ಪರಿಷತ್ತಿನ 2ನೇ ಮಹಡಿ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಸಭಾಂಗಣದಲ್ಲಿ ಅಳವಡಿಸಲಾಗಿದ್ದ ವಿವಿಧ ಉಪಕರಣಗಳು, Electronic Equipment's, Electrical Items, Chairs, Tables, Cables etc ಸುಟ್ಟು ಹೋಗಿರುತ್ತವೆ. ಇದಲ್ಲದೇ ಸಭಾಂಗಣದ ಕಿಟಕಿಗಳು, ಗಾಜು Fall Ceiling, Wooden wall ಇನ್ನಿತರ ಸಾಮಗ್ರಿಗಳು ಕೂಡ ಹಾಳಾಗಿರುತ್ತವೆ.<br><br>ಈ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ವಿವಿಧ ರಾಷ್ಟ್ರೀಯ, ಅಂತರಾಷ್ಟ್ರೀಯ ಕಾರ್ಯಗಾರಗಳು, ಸೆಮಿನಾರ್‌ಗಳು ಹಾಗೂ ಇನ್ನಿತರೇ ಕಾರ್ಯಕ್ರಮಗಳನ್ನು ಆನ್‌ಲೈನ್/ಆಫ್ ಲೈನ್ ಮೂಲಕ ಹಮ್ಮಿಕೊಳ್ಳುತ್ತಿದ್ದು, Vedio Conferencing & Presentation ಸೌಲಭ್ಯಗಳಿಲ್ಲದೇ ಪರಿಷತ್ತಿನ ಕೆಲಸ ಕಾರ್ಯಗಳಿಗೆ ಅಡಚಣೆಯುಂಟಾಗುತ್ತದೆ. ಇದಲ್ಲದೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ರಾಜ್ಯದ ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಸಾಕಷ್ಟು ಸಭೆಗಳನ್ನು ಹಮ್ಮಿಕೊಳ್ಳುತ್ತಿದ್ದು ಸಭೆಗಳನ್ನು ನಡೆಸಲು ಪರಿಷತ್ತಿನ 2ನೇ ಮಹಡಿಯ ಸಭಾಂಗಣವನ್ನು ತುರ್ತಾಗಿ ನವೀಕರಣಗೊಳಿಸಬೇಕಾಗಿರುತ್ತದೆ.<br><br>ಲೋಕೋಪಯೋಗಿ ಇಲಾಖೆ (PWD) ಅಂದಾಜು ಪಟ್ಟಿಯಲ್ಲಿನ ದರಗಳನ್ನು ಆಧರಿಸಿ ಸದರಿ ಅಂದಾಜು ಪಟ್ಟಿಯ ಜೊತೆಗೆ Electronics Items ಮತ್ತು GST ಸೇರಿ ರೂ.92,64,379/- ಗಳಾಗಬಹುದೆಂದು ಅಂದಾಜಿಸಲಾಗಿದ್ದು, ಕಾಮಗಾರಿಯನ್ನು ತ್ವರಿತವಾಗಿ ಮುಗಿಸಬೇಕಾದರೆ PWD ರವರು 4G ವಿನಾಯಿತಿ ಕೋರಬೇಕಾಗುತ್ತದೆ ಈ ಕೋರಿಕೆಯ ಪ್ರಸ್ತಾವನೆಯು ಪರಿಷತ್ತಿನಿಂದ, ಉನ್ನತ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಗೆ ಶಿಫಾರಸ್ಸು ಮಾಡಬೇಕಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳಿಂದಾಗಿ ಕಾಮಗಾರಿ ಕೈಗೆತ್ತಿಕೊಳ್ಳಲು ವಿಳಂಬವಾಗುವ ಸಾಧ್ಯತೆಯಿರುತ್ತದೆ<br><br>ಆದ್ದರಿಂದ, ಈ ಕಾಮಗಾರಿಯನ್ನು ಸರ್ಕಾರದ ಪತ್ರ ಸಂಖ್ಯೆ: ಇಡಿ123ವಿವಿಧ2022 ದಿ:09.01.2023 ರ ಪತ್ರದಲ್ಲಿ ತಿಳಿಸಿದಂತೆ GEM ಅಡಿಯಲ್ಲಿ ನೊಂದಾಯಿಸಿಕೊಂಡ ಸಂಸ್ಥೆಗಳಿಂದ ಸರಕು ಮತ್ತು ಸೇವಾ ಸೌಲಭ್ಯವನ್ನು ಪಡೆಯುವಂತೆ ಸೂಚಿಸಿರುವ ಹಿನ್ನಲೆಯಲ್ಲಿ, ಮತ್ತು ಪರಿಷತ್ತು GEM ನಲ್ಲಿ ಈಗಾಗಲೇ ನೊಂದಾಯಿಸಿಕೊಂಡಿರುವುದರಿಂದ ಈ ಕಾಮಗಾರಿಯನ್ನು GEM ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು.<br><br>GEM ನಿಯಮಗಳ ಪ್ರಕಾರ, ಟೆಂಡರ್ Bid Quote ಮಾಡಲು ದಿ: 06.02.2023 ರಿಂದ 16.02.2023 ರವರೆಗೆ ಅವಕಾಶ ಕಲ್ಪಿಸಿದ್ದು, ಈ ಕೆಳಕಂಡ ಗುತ್ತಿಗೆ ಸಂಸ್ಥೆಗಳು ಟೆಂಡರ್ ನ ಲ್ಲಿ ಭಾಗವಹಿಸಿದ್ದು ದಿ:20.02.2023 ರಂದು ತಾಂತ್ರಿಕ ಬಿಡ್ ಮತ್ತು ದಿ:23.02.2023 ರಂದು ಆರ್ಥಿಕ ಬಿಡ್ ತೆರೆಯಲಾಗಿತ್ತು.<br><br>1. Vinayaka Enterprises<br>2. Sheethal Products Bangalore<br>3. Dreams Interiors, Mysore |

Vinayaka Enterprises ಸಂಸ್ಥೆಯ ತಾಂತ್ರಿಕ ಬಿಡ್‌ಗಳನ್ನು ಟೆಂಡರ್ ಪರಿಶೀಲನಾ ಮತ್ತು ಅನುಮೋದನಾ ಸಮಿತಿಯು ಪರಿಶೀಲಿಸಿ, ಕಳೆದ 3 ವರ್ಷಗಳಲ್ಲಿ ಕನಿಷ್ಠ Turn over 1.50 ಕೋಟಿಗಳಿಗಿಂತ ಕಡಿಮೆ ಇರುವುದರಿಂದ ಇವರನ್ನು ತಾಂತ್ರಿಕವಾಗಿ ಅನರ್ಹಗೊಳಿಸಲಾಯಿತು.

M/s Sheethal Products Bangalore ಮತ್ತು Dreams Interiors, Mysore ಇವರುಗಳನ್ನು ತಾಂತ್ರಿಕವಾಗಿ ಅರ್ಹಗೊಳಿಸಲಾಯಿತು ಮತ್ತು ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿ ಕೆಳಕಂಡಂತೆ ಅರ್ಹ ಗುತ್ತಿಗೆದಾರರು ದರವನ್ನು Quote ಮಾಡಿರುತ್ತಾರೆ.

| Participated Agency | Tender Amount | Quoted Amount | Lowest Quoted |
|---|---|---|---|
| Dreams Interiors, Mysore | 92,64,379/- | 1,06,82,407/- | L-1 |
| M/s Sheethal Products Bangalore | 92,64,379/- | 1,20,46,839/- | L-2 |

L-1 ಬಿಡ್ಡುದಾರರಾದ Dreams Interiors, Mysore ಇವರನ್ನು Negotiate ಮಾಡಲು ಆಹ್ವಾನಿಸಲಾಗಿ ಈ ಗುತ್ತಿಗೆ ಸಂಸ್ಥೆಯವರು ರೂ.96,17,570/- ಗಳಿಗೆ ಅಂದರೆ, Tender Premium ಶೇ.5 ರಷ್ಟು ಮಿತಿಯೊಳಗೆ ಸಂಧಾನಿತ ದರಕ್ಕೆ ಒಪ್ಪಿಗೆ ನೀಡಿದ್ದು, Gem Portal ಮುಖಾಂತರ ಈ ಗುತ್ತಿಗೆ ಸಂಸ್ಥೆಗೆ ದಿ:05.04.2023 ರಿಂದ ಕಾಮಗಾರಿ ಪ್ರಾರಂಭಿಸಿ ದಿ:20.05.2023 ಕ್ಕೆ ಮುಕ್ತಾಯಗೊಳಿಸಲು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಈ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಸಮಿತಿಯ ಸಭೆಯ ಮುಂದೆ ಘಟನೋತ್ತರ ಮಂಜೂರಾತಿಗೆ ಸಲ್ಲಿಸಿದೆ.

**ನಿರ್ಣಯ:**

**ಈ ವಿಷಯದ ಬಗ್ಗೆ ಸಭೆ ವಿವರವಾಗಿ ಪರಿಶೀಲಿಸಿ ನಿಗಧಿತ ಅವಧಿಯೊಳಗೆ ಕಾಮಗಾರಿ ಮುಗಿಸುವಂತೆ ಸೂಚಿಸಿರುವುದಲ್ಲದೇ, ಈಗಾಗಲೇ GEM ಮೂಲಕ ತೆಗೆದುಕೊಂಡ ಟೆಂಡರ್ ಕಾಮಗಾರಿಗೆ ಘಟನೋತ್ತರ ಮಂಜೂರಾತಿ ನೀಡಲು ಅನುಮೋದಿಸಿತು.**

05 **ವಿಷಯ : ಪರಿಷತ್ತಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಯೋಜನೆಯಡಿಯಲ್ಲಿ ಒದಗಿಸಿರುವ ಅನುದಾನದ ಖರ್ಚು-ವೆಚ್ಚಗಳು**

ಪರಿಷತ್ತಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಯೋಜನೆಯಡಿಯಲ್ಲಿ ಒದಗಿಸಿರುವ ರೂ. 2.00 ಕೋಟಿಗಳ ಅನುದಾನದಲ್ಲಿ ಭರಿಸಿರುವ ವೆಚ್ಚಗಳ ಪಟ್ಟಿಯನ್ನು (ಮಾರ್ಚ್ -2023 ರ ಅಂತ್ಯಕ್ಕೆ) ಕಾರ್ಯನಿರ್ವಾಹಕ ಸಮಿತಿ ಸಭೆಯ ಅವಗಾಹನೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

(ವೆಚ್ಚಗಳ ಪಟ್ಟಿ ಲಗತ್ತಿಸಿದೆ)

**ನಿರ್ಣಯ: ಸಭೆಯು ಅವಗಾಹಿಸಿ ಅನುಮೋದಿಸಿತು.**

06

**ವಿಷಯ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನ ಪರಿಷ್ಕರಣೆ ಬಗ್ಗೆ**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ದಿನನಿತ್ಯದ ಬೆಲೆಗಳ ಏರಿಕೆ, ಪ್ರಯಾಣ ದರ, ಇಂಧನ, ವಿದ್ಯುತ್, ಮನೆ ಬಾಡಿಗೆ ಇತರೆ ದರಗಳು ಹೆಚ್ಚಳವಾಗಿರುವುದರಿಂದ ಜೀವನ ನಿರ್ವಹಣೆ ಕಷ್ಟಕರವಾಗಿದೆ ಹಾಗೂ ಜೀವನ ನಿರ್ವಹಣೆಯು ತುಂಬಾ ದುಬಾರಿಯಾಗಿದ್ದು ಈಗಿನ ಆರ್ಥಿಕ ಪರಿಸ್ಥಿಯಲ್ಲಿ ಜೀವನ ಸಾಗಿಸುವುದು ಕಷ್ಟಕರವಾಗಿದೆ ಎಂದು ವೇತನವನ್ನು ಪ್ರತಿ ವರ್ಷದಂತೆ ಈ ವರ್ಷವು ಸಹ ಹೆಚ್ಚಿಸಲು ಮನವಿ ದಿನಾಂಕ:02.03.2023 ರಂದು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಮನವಿ ಮಾಡಿರುತ್ತಾರೆ. (ಮನವಿ ಪತ್ರ ಲಗತ್ತಿಸಿದೆ)

23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ದಿನಾಂಕ: 01.07.2021 ರಿಂದ ಅನ್ವಯವಾಗುವಂತೆ ಶೇ.13.25% ರಷ್ಟು ಹೆಚ್ಚಿಸಿ ಅನುಮೋದನೆ ನೀಡಲಾಗಿದೆ.

ಪ್ರಸ್ತುತ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರೋಢೀಕೃತ ವೇತನ ಪಡೆಯುತ್ತಿರುವ ಸಿಬ್ಬಂದಿ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳ ವೇತನಗಳ ವಿವರಗಳು ಕೆಳಕಂಡಂತಿವೆ:

| Sl.no | Name of Employee | Salary | Designation | Salary | Hike @ 6.50% |
|---|---|---|---|---|---|
| 1 | Sri. Eshwarachary | Consolidated Salary | PS to Vice Chairman | 50000.00 | 3250.00 |
| 2 | Sri. H.C Jayaprakash | Consolidated Salary | Accounts officer | 45767.00 | 2975.00 |
| 3 | Sri. Shanthakumar | Consolidated Salary | Office Superintendent | 43000.00 | 2795.00 |
| 4 | Ramesh M.R | Consolidated Salary | Driver | 34881.00 | 2267.00 |
| Sub total | | | | | 11287.00 |

| Sl.no | Name of Employee | Salary | Designation | Salary | Hike @ 6.50% |
|---|---|---|---|---|---|
| 1 | Basavaraj V. | Outsourcing Salary | Programmer | 43100.00 | 2801.00 |
| 2 | E. Vijayalakshmi | Outsourcing Salary | FDA | 25800.00 | 1677.00 |
| 3 | Nalinakshi S. | Outsourcing Salary | FDA | 22400.00 | 1456.00 |
| 4 | Sushma R | Outsourcing Salary | PA to ED | 22950.00 | 1491.00 |
| 5 | Kiran Kumar V M. | Outsourcing Salary | DEO | 25800.00 | 1677.00 |

| | | | | | |
|---|---|---|---|---|---|
| 6 | Poornima R. | Outsourcing Salary | DEO | 18600.00 | 1209.00 |
| 7 | Sharath Babu N. | Outsourcing Salary | SDA | 24600.00 | 1599.00 |
| 8 | Sandhya M.C | Outsourcing Salary | SDA | 18600.00 | 1209.00 |
| 9 | Manjunath K L | Outsourcing Salary | Group D | 20400.00 | 1326.00 |
| 10 | Devaraj C M | Outsourcing Salary | Group D | 20400.00 | 1326.00 |
| 11 | Babusha D Budri | Outsourcing Salary | Group D | 18600.00 | 1209.00 |
| 12 | Nikhil D. | Outsourcing Salary | Group D | 18600.00 | 1209.00 |
| 13 | Sangappa B. A | Outsourcing Salary | Group D | 18600.00 | 1209.00 |
| 14 | Ashok V. | Outsourcing Salary | Group D | 18600.00 | 1209.00 |
| 15 | Raghavendra N.G | Outsourcing Salary | Driver | 21400.00 | 1391.00 |
| 16 | Shivakumar S. | Outsourcing Salary | Driver | 17000.00 | 1105.00 |
| Sub Total | | | | | 23103.00 |
| **Grand Total** | | | | | **34390.00** |

ಕರ್ನಾಟಕ ಸರ್ಕಾರವು ಸರ್ಕಾರಿ ನೌಕರರಿಗೆ 05.04.2022 ರಲ್ಲಿ ಶೇ.2.75% ಮತ್ತು 07.10.2022 ರಲ್ಲಿ 3.75% ರಷ್ಟು ತುಟ್ಟಿ ಭತ್ಯೆಯನ್ನು ಹೆಚ್ಚಿಸಿದ್ದು, ಈ ಪ್ರಕಾರವಾಗಿ ಪರಿಷತ್ತಿನ ಕ್ರೋಢಿಕೃತ ವೇತನದಾರರಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಒಟ್ಟು 6.50% ರಷ್ಟು ವೇತನವನ್ನು ಹೆಚ್ಚಿಸಲು ಪ್ರಸ್ತಾವನೆಯನ್ನು ಸಲ್ಲಿಸಿದೆ.

ಈ ಹೆಚ್ಚುವರಿಯಾಗಿ ತಗಲುವ ವಾರ್ಷಿಕ ವೇತನ ವೆಚ್ಚ ರೂ.4,12,680/- ಗಳನ್ನು ಪರಿಷತ್ತಿನ ಆಂತರಿಕ ಸಂಪನ್ಮೂಲದಿಂದ ಭರಿಸಲು ಕಾರ್ಯನಿರ್ವಾಹಕ ಪರಿಷತ್ತಿನ ಸಮಿತಿ ಸಭೆಯ ಅನುಮೋದನೆಗೆ ಸಲ್ಲಿಸಿದೆ.

**ಚರ್ಚೆ:** ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಮಾತನಾಡಿ ಹೊರಗುತ್ತಿಗೆ ಟೆಂಡರ್ ನ್ನು ಪ್ರತಿ ವರ್ಷ ಕರೆಯುವಂತೆ ಮತ್ತು ವೇತನದ ಹೆಚ್ಚಳವನ್ನು ಟೆಂಡರ್ ಆಧಾರದ ಮೇಲೆ ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ರಾಜ್ಯ ಸರ್ಕಾರದ ಕನಿಷ್ಠ ವೇತನದಡಿಯಲ್ಲಿ ನಿಗಧಿಪಡಿಸಿ, ವಾರ್ಷಿಕವಾಗಿ 7.50% ರಷ್ಟು ವೇತನವನ್ನು ಹೆಚ್ಚಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು.

ಕಾರ್ಯನಿರ್ವಾಹಕ ನಿರ್ದೇಶಕರ ವಾಹನ ಚಾಲಕರಿಗೆ ನೀಡುತ್ತಿರುವ ವೇತನ ಜಾಸ್ತಿಯೆಂದು ಈ ಹುದ್ದೆಯನ್ನು ಹೊರಗುತ್ತಿಗೆ ಮೇಲೆ ತೆಗೆದುಕೊಳ್ಳಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿತು.

ಕ್ರೋಢೀಕೃತ ವೇತನ ಪಡೆಯುತ್ತಿರುವ ಸಿಬ್ಬಂದಿಯ ಈ ಕೆಳಕಂಡ ಹುದ್ದೆಯನ್ನು ಮಾರ್ಪಡಿಸುವಂತೆ ಸೂಚಿಸಿತು.

| ಪ್ರಸ್ತುತ ಇರುವ ಹುದ್ದೆ | ಮಾರ್ಪಡಿಸಿದ ಹುದ್ದೆ |
|---|---|
| ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ | ವಿಶೇಷ ಕರ್ತವ್ಯಾಧಿಕಾರಿ |

**ನಿರ್ಣಯ:**

**ಈ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಮುಂದಿನ ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ನಿರ್ಣಯಿಸಿತು.**

07 **ವಿಷಯ : ಪರಿಷತ್ತಿಗೆ ಸಮಾಲೋಚಕರನ್ನು ನೇಮಕ ಮಾಡಿರುವ ಬಗ್ಗೆ**

ಸರ್ಕಾರದ ಅಧಿಸೂಚನೆ ಸಂಖ್ಯೆ. ಇ.ಕ್ರ.ಸಂ:ಇಡಿ 190 ಯುಆರ್‌ಸಿ 2021 ದಿನಾಂಕ: 18.09.2021 ರನ್ವಯ ಡಾ.ಎಂ.ಜಯಪ್ಪ, ಸಹ-ಪ್ರಾಧ್ಯಾಪಕರು, ಆರ್.ಬಿ.ಎ.ಎನ್.ಎಂ.ಎಸ್ ಅನುದಾನಿತ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು, ಇವರನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ವಿಶೇಷಾಧಿಕಾರಿಯಾಗಿ (ಅನ್ಯ ಕಛೇರಿ ಕರ್ತವ್ಯ) ಮೇಲೆ ನಿಯೋಜಿಸಲಾಗಿತ್ತು ಮತ್ತು ಡಾ.ಎಂ.ಜಯಪ್ಪ, ರವರು ದಿನಾಂಕ:31.01.2023 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ.

ಸರ್ಕಾರದ ಅಧಿಸೂಚನೆಯಂತೆ R.B.A.N.M.S ಅನುದಾನಿತ ಪ್ರಥಮ ದರ್ಜೆ ಕಾಲೇಜಿನ ಡಾ.ಎಂ.ಜಯಪ್ಪ, ಸಹ-ಪ್ರಾಧ್ಯಾಪಕರು ದಿನಾಂಕ: 30.10.2021 ರಿಂದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ವಿಶೇಷಾಧಿಕಾರಿಯಾಗಿ ನೇಮಿಸಲಾಗಿತ್ತು. ಸದರಿಯವರು ಪರಿಷತ್ತು ವಹಿಸಿದ ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಮತ್ತು NASSCOM ಸಹಯೋಗದೊಂದಿಗೆ ಕೈಗೊಂಡಿದ್ದ 1. Digital Fluency, Artificial Intelligence ಮತ್ತು Financial Awareness ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಲಾಗಿತ್ತು. ಅದರಂತೆ ಡಾ.ಎಂ.ಜಯಪ್ಪ ರವರು ರಾಜ್ಯದ ವಿಶ್ವವಿದ್ಯಾಲಯಗಳು /ಕಾಲೇಜುಗಳಿಗೆ ಭೇಟಿ ನೀಡಿ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳು/ಬೋಧಕ ವರ್ಗದವರಿಗೆ ಸದರಿ ವಿಷಯವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಸದರಿ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯ/ಕಾಲೇಜುಗಳಲ್ಲಿ ಇನ್ನು ಹೆಚ್ಚಿನ ಅರಿವು ಮೂಡಿಸುವುದು ಅವಶ್ಯಕವಾಗಿರುವ ಹಿನ್ನೆಲೆಯಲ್ಲಿ ಅವುಗಳನ್ನು ಮುಂದುವರಿಸುವುದು ಸೂಕ್ತವೆಂದು ಕಂಡುಬರುತ್ತದೆ.

ಮುಂದುವರೆದು, ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ 4, 5 ಮತ್ತು ತದನಂತರ ಸೆಮಿಸ್ಟರ್‌ಗಳಿಗೆ ಪಠ್ಯಕ್ರಮಗಳನ್ನು ರಚಿಸುವ ಕಾರ್ಯವನ್ನು ಪರಿಷತ್ತು ಸದ್ಯದಲ್ಲೇ ಪ್ರಾರಂಭಿಸಲು ತಯಾರು ನಡೆಸಿದೆ. ಈ ಹಿಂದೆ NEP ಪಠ್ಯಕ್ರಮಗಳ ಸಮಿತಿಗೆ ಹಲವು ವಿಷಯಗಳ ಸಮಿತಿಗೆ ಡಾ.ಎಂ.ಜಯಪ್ಪ ರವರು ಸಂಚಾಲಕರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮುಂದಿನ ಪಠ್ಯಕ್ರಮಗಳ (4,5 ಮತ್ತು ತದನಂತರದ ಸೆಮಿಸ್ಟರ್‌ಗಳಿಗೆ) ಕೆಲವು ವಿಷಯಗಳಿಗೆ ಸಮಿತಿಯ ಸಂಚಾಲಕರಾಗಿ ಹಾಗೂ NASSCOM & NSE Academy offer ಮಾಡುತ್ತಿರುವ ವಿಷಯಗಳ ಕಾರ್ಯಕ್ಕೆ ಡಾ.ಎಂ.ಜಯಪ್ಪ ರವರನ್ನು ಪರಿಷತ್ತಿನ ಸಮಾಲೋಚಕರಾಗಿ ನೇಮಿಸಲು ಕಡತ

| | |
|---|---|
| | ಸಂಖ್ಯೆ : ಕರಾಉಶಿಪ/89/ವೈ.ಕ/2021-22 ರ ಪ್ಯಾರಾ (81) ರಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಅನುಮೋದಿಸಿರುತ್ತಾರೆ.<br><br>ಈ ಪ್ರಕಾರ, ಶ್ರೀಯುತರಿಗೆ ಮಾಸಿಕ ಕ್ರೋಢೀಕೃತ ವೇತನ ರೂ.68,000/-ಗಳನ್ನು ನಿಗಧಿಪಡಿಸಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.<br><br>ಈ ವಿಷಯವನ್ನು ಕಾರ್ಯನಿರ್ವಾಹಕ ಸಮಿತಿಯ ಅನುಸಮರ್ಥನೆಗಾಗಿ ಮಂಡಿಸಿದೆ.<br><br>**ನಿರ್ಣಯ:**<br><br>**ಈ ವಿಷಯದಲ್ಲಿ ಸಭೆಯು ಪರಿಶೀಲಿಸಿ, ಡಾ.ಎಂ ಜಯಪ್ಪ ರವರನ್ನು ಮುಂದಿನ ಆದೇಶದವರೆಗೆ ಅಥವಾ ಗರಿಷ್ಠ 1 ವರ್ಷದ ಅವಧಿಗೆ ಮುಂದುವರೆಸಲು ಸಭೆ ನಿರ್ಣಯಿಸಿತು.** |
| 08 | **ವಿಷಯ : ಪರಿಷತ್ತಿನ 2023-24ನೇ ಸಾಲಿನ ಆಯವ್ಯಯ ಅಂದಾಜು ಪ್ರಸ್ತಾವನೆ ಕುರಿತು**<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2023-24ನೇ ಸಾಲಿನಲ್ಲಿ ರೂ.13.38 ಕೋಟಿಗಳಿಗೆ ಆಯವ್ಯಯ ಅಂದಾಜುಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ದಿ :11.01.2023 ರಂದು ಸಲ್ಲಿಸಲಾಗಿದೆ.<br><br>1. ಆಡಳಿತಾತ್ಮಕ ವೆಚ್ಚಗಳಿಗಾಗಿ = ರೂ. 473.85 ಲಕ್ಷಗಳು<br>2. ಹೊಸ ಯೋಜನೆಗಾಗಿ = ರೂ. 865.00 ಲಕ್ಷಗಳು<br>ಒಟ್ಟು=1338.85 ಲಕ್ಷಗಳು<br><br>ಈ ಅಂದಾಜು ಪ್ರಸ್ತಾವನೆಗೆ ಎದುರಾಗಿ ಸರ್ಕಾರವು 2023-24ನೇ ಸಾಲಿನ ಆಯವ್ಯಯದಲ್ಲಿ ರೂ.1.00 ಕೋಟಿಗಳ ಅನುದಾನವನ್ನು ಒದಗಿಸಿದೆ.<br><br>ಈ ಅನುದಾನವು ಪರಿಷತ್ತಿನ ಆಡಳಿತಾತ್ಮಕ ಮತ್ತು ಹೊಸ ಶೈಕ್ಷಣಿಕ ಯೋಜನೆಗಳ ಅನುಷ್ಠಾನಕ್ಕೆ ಸಾಕಾಗದೆಂದು ಸರ್ಕಾರಕ್ಕೆ ದಿ:21.03.2023 ರಂದು ಪತ್ರವನ್ನು ಬರೆಯಲಾಗಿದ್ದು ಹೆಚ್ಚುವರಿ ಅನುದಾನವನ್ನು ನೀಡುವಂತೆ ಈಗಾಗಲೇ ಕೋರಿದೆ.<br><br>ಈ ವಿಷಯವನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಅವಗಾಹನೆಗೆ ಸಲ್ಲಿಸಿದೆ.<br><br>**ನಿರ್ಣಯ:**<br><br>**2023-24ನೇ ಸಾಲಿನ ಆಯವ್ಯಯವನ್ನು ಪರಿಷತ್ತಿನ ಆಂತರಿಕ ಸಂಪನ್ಮೂಲಗಳನ್ನು ಒಳಗೊಂಡಂತೆ ಅಂದಾಜು ಸ್ವೀಕೃತಿ ಮತ್ತು ಅಂದಾಜು ವೆಚ್ಚಗಳ ಆಯವ್ಯಯವನ್ನು ಸಿದ್ಧಪಡಿಸಿ ಅಪರ ಮುಖ್ಯ ಕಾರ್ಯದರ್ಶಿಗಳ ಅವಗಾಹನೆಗೆ ಸಲ್ಲಿಸಿ, ನಂತರ ಸಮಿತಿಯ ಎಲ್ಲಾ ಸದಸ್ಯರುಗಳಿಗೆ Circular Agenda ಮೂಲಕ ಕಳುಹಿಸಿ, ಅನುಮೋದನೆ ಪಡೆಯುವುದು ಹಾಗೂ** |

| | |
|---|---|
| | ಪರಿಷತ್ತಿನ ಆರ್ಥಿಕ ಸ್ವಾವಲಂಭನೆಯನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ವಿಶ್ವವಿದ್ಯಾನಿಲಯಗಳ ಶುಲ್ಕವನ್ನು ಪರಿಷ್ಕರಿಸಲು ಪ್ರಸ್ತಾವನೆಯನ್ನು ಸಿದ್ದಪಡಿಸಿ ಮುಂದಿನ ಸಭೆಯ ಮುಂದೆ ಮಂಡಿಸಲು ಸಭೆಯು ತೀರ್ಮಾನಿಸಿತು. |
| 09 | **ವಿಷಯ: ಪರಿಷತ್ತು ಹಾಗೂ ಬ್ರಿಟಿಷ್ ಕೌನ್ಸಿಲ್ ನಡುವಿನ ಪರಸ್ಪರ ಒಪ್ಪಂದದ ಕುರಿತು**<br><br>The British Council awards the Karnataka State Higher Education Council (KSHEC) a grant for the purpose of the Furthering Higher Education Partnerships - UK and Karnataka (the 'Programme'). A project between Karnataka State Higher Education Council, three UK Higher Education Institutes (namely: Birmingham City University; University of Highlands and Islands; and University of Bradford) and three Indian Higher Education Institutes (namely: **Bangalore North University; Bangalore City University; and Gulbarga University).**<br><br>The British Council has disbursed a grant of GBP 30,000 to KSHEC which would be allocated by KSHEC towards capacity building exercise and faculty development of the three Indian universities in agreement and consultation with the British Council.<br><br>The Commencement Date of this Agreement shall be 14 February 2023. This Agreement shall continue (unless terminated in accordance with clause 2.2 below or clause 7 of Schedule 5) until 31 March 2024 (the "Term").<br><br>ದಿನಾಂಕ: 14.02.2023 ರ ಒಪ್ಪಂದದ ಪ್ರಕಾರ, ಬ್ರಿಟಿಷ್ ಕೌನ್ಸಿಲ್ ನಿಂದ ಪರಿಷತ್ತಿಗೆ ಬ್ಯಾಂಕ್ ಆಫ್ ಬರೋಡ್ ಖಾತೆಗೆ ದಿ:29.03.2023 ರಂದು ರೂ.30,30,000/-ಗಳು ಜಮಾ ಮಾಡಿರುತ್ತಾರೆ. ಈ ಮೊತ್ತದಲ್ಲಿ ತಲಾ ರೂ.10,10,000/- ಗಳಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯ ಗಳಿಗೆ ಪಾವತಿಸಲಾಗುತ್ತದೆ. ಉಳಿದ ರೂ.10,10,000/- ಗಳನ್ನು Leadership Development Activity ಸಲುವಾಗಿ UK ಗೆ ತಂಡವನ್ನು ನಿಯೋಜಿಸಲು ಬಳಸಲಾಗುವುದು.<br><br>ಈ ವಿಷಯವನ್ನು ಕಾರ್ಯನಿರ್ವಾಹ ಸಮಿತಿ ಸಭೆಯ ಅವಗಾಹನೆ ಮತ್ತು ಅನುಮೋದನೆಗೆ ಸಲ್ಲಿಸಿದೆ.<br><br>**ಚರ್ಚೆ:** ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಮಾತನಾಡಿ ವೈದ್ಯಕೀಯ ಶಿಕ್ಷಣ ಕೂಡಿದಂತೆ ಇತರೆ Faculty ಗಳನ್ನು ಪರಿಷತ್ತಿನ ಇಂತಹ ಯೋಜನೆಗಳ ಭಾಗವಾಗಿ ಪರಿಗಣಿಸುವಂತೆ ಅಭಿಪ್ರಾಯಪಟ್ಟರು.<br><br>Leadership Delegation ನ ಕಲಿಕೆ ಮತ್ತು ಅನುಭವವನ್ನು ರಾಜ್ಯದ ಇತರೆ ವಿಶ್ವವಿದ್ಯಾನಿಲಯದ ಉಪಕುಲಪತಿಗಳೊಂದಿಗೆ ಹಂಚಿಕೊಳ್ಳುವುದು ಅಪೇಕ್ಷಣೀಯ ಎಂದು ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳು ಅಭಿಪ್ರಾಯಪಟ್ಟರು.<br><br>ಇದೇ ಸಮಯದಲ್ಲಿ Industry Institution ಸಹಭಾಗಿತ್ವದ ಅಗತ್ಯತೆಯನ್ನು ಕುರಿತು ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಹಾಗೂ ಸಮಿತಿಯ ಸದಸ್ಯರಾದ ಶ್ರೀನಾಥ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |

| | |
|---|---|
| | ನಿರ್ಣಯ:<br>**ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಲಿಕೆ ಮತ್ತು ಅನುಭವಗಳನ್ನು ಎಲ್ಲಾ ಉಪಕುಲಪತಿಗಳೊಡನೆ ಹಾಗೂ ಸಂಬಂಧಪಟ್ಟವರೊಡನೆ ಹಂಚಿಕೊಳ್ಳಲು ಸಭೆಯು ನಿರ್ಣಯಿಸಿತು.** |

ಸಭೆಯ ಕೊನೆಯಲ್ಲಿ ಅಧ್ಯಕ್ಷರು, ಸದಸ್ಯರು ನೀಡಿದ ಅಮೂಲ್ಯ ಸಲಹೆಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿ ಕಾರ್ಯನಿರ್ವಾಹಕ ನಿರ್ದೇಶಕರು, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

(ಪ್ರೊ. ಗೋಪಾಲಕೃಷ್ಣ ಜೋಷಿ)
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

(ಪ್ರೊ. ವೈ.ಎಸ್ ಸಿದ್ದೇಗೌಡ)
ಉಪಾಧ್ಯಕ್ಷರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

Karnataka State Higher Education Council

The members present in the 24th Executive Committee Meeting held on 27.04.2023 at KSHEC at 11.30 AM

| Sl.no | Name & Designation | Committee Member | Sign |
|---|---|---|---|
| 1 | Prof. Y.S Siddegowda<br>Vice Chairman, Karnataka State Higher Education Council | Chairman | [signature] |
| 2 | Sri. S.R Umashankar IAS<br>Additional Chief Secretary to Govt. Dept. of Higher Education | Ex- officio Member | [signature] |
| 3 | Principal Secretary to Govt.<br>Dept. of Medical Education<br>NAVEEN RAJ SINGH IAS | Ex- officio Member | [signature] |
| 4 | Prof. Jogan Shankar<br>Former VC, Kuvempu University, Shivamogga | Member | [signature] |
| 5 | Prof. Usharani<br>Director, EMMRD University of Mysore | Member | ABSENT |
| 6 | Sri. ~~Shrinath~~ N.S SREENATH N.S<br>Managing Director,<br>MERCK Life Science | Member | [signature] |
| 7 | Prof. Anurag Behar<br>Former VC, Ajim Premji University, Bangalore | Member | ABSENT |
| 8 | Prof. Harish Ramaswamy<br>Vice Chancellor, Raichur University, Raichur | Member | [signature] 27.4.2023 |
| 9 | Prof. Dayananda Agsar<br>Vice Chancellor, Gulbarga University, Kalaburgi | Member | [signature] |
| 10 | Prof. Gopalkrishna Joshi<br>Executive Director, KSHEC | Member Secretary | [signature] 27.4.23 |
| 11 | Dr. Thandava Gowda T.N.<br>Administrative Officer, KSHEC | | [signature] |
| 12 | Sri. H.C. Jayaprakash<br>Accounts Officer, KSHEC | | [signature] |